■ ಪೂರ್ವಿ



2016ರಲ್ಲಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ಒಂದು ಅದ್ದೂರಿ ಮದುವೆ ನಡೆಯಿತು. ಬಿಜೆಪಿಯ ಮಾಜಿ ಸಚಿವ ಗಾಲಿ ಜನಾರ್ದನ ರೆಡ್ಡಿ ಅವರ ಪುತ್ರಿಯ ವಿವಾಹ ಅದು. ಆಗ ಕರ್ನಾಟಕದ ರಾಜ್ಯಪಾಲರಾಗಿದ್ದ ವಜುಭಾಯಿ ವಾಲಾ, ಸಚಿವರಾದ ಜಿ. ಪರಮೇಶ್ವರ, ಡಿ.ಕೆ. ಶಿವಕುಮಾರ್, ಎಚ್.ಕೆ. ಪಾಟೀಲ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ರಾಜಕಾರಣಿಗಳ ದಂಡೇ ಹಾಜರಾದ ಮದುವೆ ಅದು. ಊಟ ಮಾಡಿದವರ ಸಂಖ್ಯೆ 50 ಸಾವಿರಕ್ಕೂ ಹೆಚ್ಚು.

ರೆಡ್ಡಿ ಜೈಲು ಸೇರುವ ಮೊದಲು ಅವರಿಗೆ ಯಾರೆಲ್ಲ ಹತ್ತಿರವಿದ್ದರೋ ಅವರ್ಯಾರೂ ಮದುವೆಗೆ ಬಂದಿರಲಿಲ್ಲ. ಜಾಮೀನು ಸಿಕ್ಕ ನಂತರ ಹೊರಬಂದವರೇ ರೆಡ್ಡಿ ಮಾಡಿದ ಮುಖ್ಯವಾದ ಕೆಲಸವೆಂದರೆ, ಮಗಳ ಮದುವೆಯ ಯೋಜನೆ. ಒಂದು ಅಂದಾಜಿನ ಪ್ರಕಾರ ಈ ಮದುವೆಯ ಊಟೋಪಚಾರ, ಅಲಂಕಾರ ಇತ್ಯಾದಿಗೇ ₹100 ಕೋಟಿಗೂ ಹೆಚ್ಚು ಖರ್ಚಾಗಿತ್ತು. ವಧು–ವರರ ಒಡವೆ, ಉಡುಗೆಗಳನ್ನೂ ಗಣನೆಗೆ ತೆಗೆದುಕೊಂಡರೆ ₹500 ಕೋಟಿಯಷ್ಟು ಹಣ ಹರಿಸಲಾಗಿತ್ತು. ವಧು ಧರಿಸಿದ್ದ ಲೆಹೆಂಗಾ ಬೆಲೆಯೂ ಕೋಟಿಗಟ್ಟಲೆ ಎಂದೆಲ್ಲ ಚರ್ಚೆಗಳಾಗಿದ್ದ ವಿವಾಹ ಅದು. ಗಣಿ ವ್ಯವಹಾರದಲ್ಲಿ ಅಪಾರ ಪ್ರಮಾಣದ ಹಣ ಸಂಪಾದಿಸಿದ್ದ ರೆಡ್ಡಿ ಅವರಿಗೆ ಅದು ದೊಡ್ಡ ಮೊತ್ತವೇನಲ್ಲ. ಈ ಮದುವೆಯ ಕಾರಣಕ್ಕೇ ಆದಾಯ ತೆರಿಗೆ ಇಲಾಖೆಯವರೂ ಅವರನ್ನು ವಿಚಾರಣೆಗೆ ಒಳಪಡಿಸುವ ಸಾಧ್ಯತೆ ಇದೆ ಎಂದೆಲ್ಲ ಆಗ ಸುದ್ದಿಯಾಗಿತ್ತು.

ಇಂತಹ ಮದುವೆಗಳು ಹಲವು 'ಮರಿ'ಗಳನ್ನು ಹಾಕುತ್ತವೆ. ಮಧ್ಯಮ ವರ್ಗದವರೂ ಮದುವೆಗಾಗಿ ದೊಡ್ಡ ಮೊತ್ತ ಖರ್ಚು ಮಾಡಲು

